# संस्कृतोत्सवस्य उद्घाटनम्

"गीता विदुरवाक्यानि धर्माः शान्तनवेरिताः । भारते न श्रुता येन तस्य जन्म निरर्थकम् ॥" इत्युक्तरीत्या मानवानां कर्तव्याकर्तव्ययोरितिकर्तव्यादिप्रतिपादने संस्कृतभाषानिबद्धानां महाभारतादिग्रन्थानां कालिदासादिकृतानां काव्यानां चोपकारित्वं बोधयन्तः श्रृंगेरीशारदापीठस्य जगद्गुरुश्रीचरणाः श्रीश्रीविधुशेखरभारतीमहास्वामिनः गिरोऽस्याः सम्भाषणैकप्रयोजनत्वं नेति तत्त्वं मुहुर्मुहुः स्मारयन्तः संस्कृतस्य उपादेयतां महत्त्वं च प्रतिपादयन्तोऽनुग्रहभाषणं व्यधासिषुः ।

२९/०८/२६ तमे दिनाङ्के, शनिवासरे केन्द्रीयसंस्कृतविश्वविद्यालयस्य श्रृंगेरीस्थराजीवगान्धीपरिसरस्थेन श्रीभारतीतीर्थशास्त्रसमुत्कर्षकेन्द्रेण श्रृंगेरी श्रीशारदापीठस्य गुरुभवने समायोजितं संस्कृतोत्सवसमारम्भमुद्घाट्य, परिसरीये वार्षिकौ शारदा-वाक्यार्थभारतीनाम्नौ पत्रिके स्वकरकञ्जैराविष्कृत्य च जगद्गुरवः सर्वानन्वग्रहीषुः । सन्दर्भेऽस्मिन् संस्कृतसाहित्यस्य विपुलतां प्रबोधयन्तः तस्य च जीवनोत्कर्षोपयोगितत्त्वावबोधकत्वं निदर्शयन्तः "आकारसदृशप्रज्ञः प्रज्ञया सदृशागमः । आगमैः सदृशारम्भ आरम्भसदृशोदयः ॥" इति कालिदासवचः संस्मार्य अभ्युदयनिःश्रेयसोभयप्रापकत्वं संस्कृतभाषाया इति निरचीचयन्।

कार्यक्रमनिरूपणं निरवहन् वेदान्तविद्याशाखासमन्वयकाः प्रो. श्री गणेश ईश्वर भट्टाः। परिसरनिदेशकाश्च प्रो. सुब्राय वि भट्टाः सान्दर्भिकैर्वचोभिः संस्कृतज्ञानस्य तत्त्वं किमिति स्थाने स्मारयन्तः स्वागतवचांसि व्याहरन् । प्रो. रामचन्द्रुलबालाजीवर्याश्च धन्यताविष्कृतिमकार्षुः ।

# *ಸಂಸ್ಕೃತೋತ್ಸವದ ಉದ್ಘಾಟನೆ*

"ಗೀತಾ ವಿದುರವಾಕ್ಯಾನಿ ಧರ್ಮಾಃ ಶಾನ್ತನವೇರಿತಾಃ । ಭಾರತೇ ನ ಶ್ರುತಾ ಯೇನ ತಸ್ಯ ಜನ್ಮ ನಿರರ್ಥಕಮ್ ॥" ಎಂಬ ಉಕ್ತಿಯ ಪ್ರಕಾರ, ಮನುಷ್ಯರ ಕರ್ತವ್ಯ-ಅಕರ್ತವ್ಯಗಳನ್ನು ಪ್ರತಿಪಾದಿಸುವಲ್ಲಿ ಸಂಸ್ಕೃತಭಾಷೆಯಲ್ಲಿ ರಚಿತವಾದ ಮಹಾಭಾರತಾದಿಗ್ರಂಥಗಳ ಹಾಗೂ ಕಾಳಿದಾಸಾದಿ ಕೃತಿಗಳ ಕಾವ್ಯಗಳ ಪಾತ್ರವನ್ನು ತಿಳಿಸುತ್ತಾ, ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು, ಈ ಭಾಷೆಯ ಪ್ರಯೋಜನವು ಕೇವಲ ಸಂಭಾಷಣೆಗೆ ಮಾತ್ರ ಸೀಮಿತವಲ್ಲ ಎಂಬ ತತ್ತ್ವವನ್ನು ಪದೇ ಪದೇ ನೆನಪಿಸುತ್ತಾ, ಸಂಸ್ಕೃತದ ಉಪಾದೇಯತೆ ಮತ್ತು ಮಹತ್ತ್ವವನ್ನು ಪ್ರತಿಪಾದಿಸುವಂತಹ ಅನುಗ್ರಹ ಭಾಷಣವನ್ನು ಮಾಡಿದರು.

೨೯/೦೮/೨೬ ರಂದು, ಶನಿವಾರದಂದು, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಶೃಂಗೇರಿಯ ರಾಜೀವಗಾಂಧಿ ಪರಿಸರದಲ್ಲಿರುವ ಶ್ರೀ ಭಾರತೀ ತೀರ್ಥ ಶಾಸ್ತ್ರ ಸಮುತ್ಕರ್ಷ ಕೇಂದ್ರದ ವತಿಯಿಂದ, ಶೃಂಗೇರಿ ಶ್ರೀ ಶಾರದಾ ಪೀಠದ ಗುರುಭವನದಲ್ಲಿ ಆಯೋಜಿಸಲಾಗಿದ್ದ ಸಪ್ತಾಹವ್ಯಾಪಿಯಾಗಿ ನಡೆಯಲಿರುವ ಸಂಸ್ಕೃತೋತ್ಸವ ಸಮಾರಂಭವನ್ನು ಉದ್ಘಾಟಿಸಿ, ಪರಿಸರದ ವಾರ್ಷಿಕ "ಶಾರದಾ" ಮತ್ತು "ವಾಕ್ಯಾರ್ಥಭಾರತೀ" ಎಂಬ ಎರಡು ಪತ್ರಿಕೆಗಳನ್ನು ಸ್ವಕರಕಮಲಗಳಿಂದ ಬಿಡುಗಡೆಗೊಳಿಸಿ ಜಗದ್ಗುರುಗಳು ಎಲ್ಲರನ್ನೂ ಅನುಗ್ರಹಿಸಿದರು. ಈ ಸಂದರ್ಭದಲ್ಲಿ ಸಂಸ್ಕೃತ ಸಾಹಿತ್ಯದ ವಿಪುಲತೆಯನ್ನು ತಿಳಿಸುತ್ತಾ, ಅದರ ಜೀವನೋತ್ಕರ್ಷಕ್ಕೆ ಉಪಯೋಗಿಯಾಗುವ ತತ್ತ್ವವನ್ನು ಬೋಧಿಸುತ್ತಾ, "ಆಕಾರಸದೃಶಪ್ರಜ್ಞಃ ಪ್ರಜ್ಞಯಾ ಸದೃಶಾಗಮಃ । ಆಗಮೈಃ ಸದೃಶಾರಂಭ ಆರಂಭಸದೃಶೋದಯಃ ॥" ಎಂಬ ಕಾಳಿದಾಸನ ವಚನವನ್ನು ಸ್ಮರಿಸಿ, ಸಂಸ್ಕೃತಭಾಷೆಯು ಅಭ್ಯುದಯ ಮತ್ತು ನಿಃಶ್ರೇಯಸ, ಎರಡನ್ನೂ ಪ್ರಾಪ್ತಗೊಳಿಸುವಂತಹುದು ಎಂದು ನಿರೂಪಿಸಿದರು.

ಕಾರ್ಯಕ್ರಮ ನಿರೂಪಣೆಯನ್ನು ವೇದಾಂತವಿದ್ಯಾಶಾಖೆಯ ಸಮನ್ವಯಕರಾದ ಪ್ರೊ. ಶ್ರೀ ಗಣೇಶ ಈಶ್ವರ ಭಟ್ಟರು ನಿರ್ವಹಿಸಿದರು. ಪರಿಸರ ನಿರ್ದೇಶಕರಾದ ಪ್ರೊ. ಸುಬ್ರಾಯ ವಿ. ಭಟ್ಟರು ಸಾಂದರ್ಭಿಕ ಮಾತುಗಳಿಂದ ಸಂಸ್ಕೃತಜ್ಞಾನದ ತತ್ತ್ವವೇನೆಂಬುದನ್ನು ನೆನಪಿಸುತ್ತಾ ಸ್ವಾಗತ ಭಾಷಣ ಮಾಡಿದರು. ಪ್ರೊ. ರಾಮಚಂದ್ರುಲ ಬಾಲಾಜಿಯವರು ಧನ್ಯವಾದ ಅರ್ಪಣೆ ಮಾಡಿದರು.